# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 256 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಾನೆ ಶ್ರೀನಿವಾಸ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 09-12-2020 |
| ಉತ್ತರಿಸುವ ಮಾನ್ಯ ಸಚಿವರು | : | ಮಾನ್ಯ ಕೃಷಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>2019 ನೇ ಸಾಲಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಒಟ್ಟು ಎಷ್ಟು ರೈತರಿಗೆ ಬೆಳೆ ವಿಮೆಯನ್ನು ಪಾವತಿಸಲಾಗಿದೆ; ಪಾವತಿಸಲಾದ ಒಟ್ಟು ಮೊತ್ತವೆಷ್ಟು;</td><td>2019 ನೇ ಸಾಲಿನ ಮುಂಗಾರು ಹಂಗಾಮಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಲ್ಲಿ ಬೆಳೆ ವಿಮೆಯನ್ನು ಪಾವತಿಸಲಾದ ರೈತರ ಸಂಖ್ಯೆ ಹಾಗೂ ಮೊತ್ತದ ವಿವರ ಕೆಳಕಂಡಂತಿದೆ.<br><br>(ರೂ. ಲಕ್ಷಗಳಲ್ಲಿ)<br>
<table>
<tr><th>ಜಿಲ್ಲೆಗಳು</th><th>ಫಲಾನುಭವಿಗಳ ಸಂಖ್ಯೆ</th><th>ಬೆಳೆ ವಿಮೆ ಪರಿಹಾರದ ಮೊತ್ತ</th></tr>
<tr><td>ಧಾರವಾಡ</td><td>*96</td><td>34.20</td></tr>
<tr><td>ಗದಗ</td><td>9842</td><td>1169.60</td></tr>
<tr><td>ಹಾವೇರಿ</td><td>84753</td><td>4677.95</td></tr>
<tr><td>ಒಟ್ಟು</td><td>94691</td><td>5881.75</td></tr>
</table>
*ಧಾರವಾಡ ಜಿಲ್ಲೆಗೆ ಸಂಬಂಧಿಸಿದಂತೆ, ನೆರೆಪ್ರವಾಹದಿಂದ ಹಾನಿಯಾಗಿರುವ 96 ರೈತ ಫಲಾನುಭವಿಗಳಿಗೆ ಒಟ್ಟು ರೂ.34.20 ಲಕ್ಷಗಳ ಮೊತ್ತವನ್ನು Localised calamity ಅಡಿಯಲ್ಲಿ ವಿಮಾ ಸಂಸ್ಥೆಯವರು ಇತ್ಯರ್ಥಪಡಿಸಿರುತ್ತಾರೆ. ಬೆಳೆ ಕಟಾವು ಪ್ರಯೋಗಗಳ ಆಧಾರದ ಮೇಲೆ ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ನೋಂದಣಿಯಾದ ಪ್ರಸ್ತಾವನೆಗಳೊಂದಿಗೆ ಬೆಳೆ ಸಮೀಕ್ಷೆಯ ದತ್ತಾಂಶವನ್ನು ತಾಳೆ ಮಾಡಿ claim initiate ಮಾಡಲಾಗುವುದು.</td></tr>
</table>

| | | |
|---|---|---|
| | | 2019-20 ರ ಹಿಂಗಾರು ಮತ್ತು ಬೇಸಿಗೆ ಹಂಗಾಮಿನಲ್ಲೂ ಸಹ ಬೆಳೆ ಸಮೀಕ್ಷೆಯ ವರದಿಯನ್ನು ಉಪಯೋಗಿಸಿ ವಿಮಾ ಪರಿಹಾರ ಮೊತ್ತ ಲೆಕ್ಕ ಹಾಕಬೇಕಾಗಿದ್ದು. ಸಂರಕ್ಷಣೆ ತಂತ್ರಾಂಶದಲ್ಲಿ ಬೆಳೆ ಸಮೀಕ್ಷೆಯ ದತ್ತಾಂಶಗಳನ್ನು integrate ಮಾಡುವ ಕಾರ್ಯವು ಪ್ರಗತಿಯಲ್ಲಿದೆ. |
| ಆ) | ಈ ಜಿಲ್ಲೆಗಳಲ್ಲಿ 2019ನೇ ಸಾಲಿನಲ್ಲಿ ಎಷ್ಟು ರೈತರಿಗೆ ಬೆಳೆ ವಿಮೆಯನ್ನು ಪಾವತಿಸಲಾಗಿದೆ ಹಾಗೂ ಪಾವತಿಸಲಾದ ಒಟ್ಟು ಮೊತ್ತವೆಷ್ಟು; | 2019 ರ ಮುಂಗಾರು ಹಂಗಾಮಿನಲ್ಲಿ ಧಾರವಾಡ, ಗದಗ ಹಾಗೂ ಹಾವೇರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಒಟ್ಟು 94691 ರೈತ ಫಲಾನುಭವಿಗಳಿಗೆ ರೂ.5881.75 ಲಕ್ಷಗಳ ಬೆಳೆ ವಿಮೆ ಪರಿಹಾರವನ್ನು ಇತ್ಯರ್ಥಪಡಿಸಲಾಗಿದೆ. |
| ಇ) | ವಿಮೆ ಕಂಪನಿಗಳು ರೈತರಿಗೆ ಬೆಳೆ ವಿಮೆ ಪಾವತಿಸುವಲ್ಲಿ ಆಗಿರುವ ವಿಳಂಬಕ್ಕೆ ಕಾರಣಗಳೇನು ಹಾಗೂ ರೈತರಿಗೆ ವಿಮೆ ಕಂಪನಿಗಳು ಪಾವತಿಸಬೇಕಾದ ಬೆಳೆ ವಿಮೆ ಪಾವತಿಸುವಂತೆ, ಸರ್ಕಾರ ವಿಮೆ ಕಂಪನಿಗಳಿಗೆ ನಿರ್ದೇಶನ ನೀಡುವುದೇ; ಇದಕ್ಕೆ ಬೇಕಾದ ಕಾಲಾವಕಾಶವೆಷ್ಟು? | 2019-20 ನೇ ಸಾಲಿನಲ್ಲಿ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವ ಪ್ರಕ್ರಿಯೆಯನ್ನು ಪ್ರಥಮ ಬಾರಿಗೆ ಸಂರಕ್ಷಣೆ ತಂತ್ರಾಂಶದ ಮುಖಾಂತರವೇ ರೈತರ ಖಾತೆಗೆ ನೇರ ನಗದು ವರ್ಗಾವಣೆ (Direct Beneficiary Transfer) ಮಾಡಲಾಗಿರುತ್ತದೆ, ಈ ವಿಧಾನದಲ್ಲಿ ಅರ್ಹ ಫಲಾನುಭವಿಗಳಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸುವುದರಿಂದ ಪಾರದರ್ಶಕತೆ ಮತ್ತು ನೈಜ ಸಮಯದ ಪಾವತಿಯ ಸ್ಥಿತಿ ದೊರಕುತ್ತದೆ. ಈ ಪ್ರಕ್ರಿಯೆಯಂತೆ ವಿಮಾ ಸಂಸ್ಥೆಯವರು ವಿಮಾ ಪರಿಹಾರವನ್ನು ಇತ್ಯರ್ಥಪಡಿಸುತ್ತಿದ್ದಾರೆ.<br>ರೈತ ಫಲಾನುಭವಿಗಳ ಆಧಾರ್ ಸಂಖ್ಯೆ ಬ್ಯಾಂಕ್ ಖಾತೆಗೆ ಲಿಂಕ್ ಆಗದೆ ಇರುವ / Account reached maximum Credit limit set on account / A/c Blocked or Frozen / Inactive Aadhar ಈ ಎಲ್ಲಾ ಕಾರಣಗಳಿಂದಾಗಿ ರೈತರಿಗೆ ಬೆಳೆ ವಿಮೆ ಪಾವತಿಸುವಲ್ಲಿ ವಿಳಂಬವಾಗುತ್ತಿದೆ. ಈ ಕುರಿತು ರೈತರಿಗೆ ಅವರ ಆಧಾರ್ ಸಂಖ್ಯೆಯನ್ನು ಬ್ಯಾಂಕ್ ಖಾತೆಯೊಂದಿಗೆ ಜೋಡಣೆ ಮಾಡಲು ಹಾಗೂ ಆಧಾರ್ ವಿವರಗಳನ್ನು update ಮಾಡುವಂತೆ ವ್ಯಾಪಕ ಪ್ರಚಾರ ಕೈಗೊಳ್ಳಲು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರದ ಮುಖಾಂತರ ತಿಳಿಸಲಾಗಿದೆ. |

| | | |
|---|---|---|
| | | ಪ್ರತಿ ಹಂಗಾಮಿನಲ್ಲಿ ಸಂರಕ್ಷಣೆ ತಂತ್ರಾಂಶದಲ್ಲಿ claim initiate ಮಾಡಿದ ನಂತರ ವಿಮಾ ಸಂಸ್ಥೆರವರಿಗೆ claim initiate ಆದ 2 ವಾರದೊಳಗಾಗಿ ಬೆಳೆ ವಿಮೆ ಪರಿಹಾರವನ್ನು ಸಂರಕ್ಷಣೆ ತಂತ್ರಾಂಶದ ಮುಖಾಂತರ ವಿಳಂಬ ಮಾಡದೆ ಇತ್ಯರ್ಥಪಡಿಸುವಂತೆ ನಿರ್ದೇಶನ ನೀಡಲಾಗಿದೆ. |

ಸಂಖ್ಯೆ:- ಕೃಇ/147/ಕೃಕೈಉ/2020

(ಬಿ.ಸಿ.ಪಾಟೀಲ್)
ಕೃಷಿ ಸಚಿವರು